ರೇಷ್ಮೆ ಕೇಂದ್ರಗಳು

2(128); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) 2013–14 ಹಾಗೂ 2014–15ನೇ ಸಾಲಿನಲ್ಲಿ ರೇಷ್ಮೆ ಇಲಾಖೆಯಿಂದ ಸರ್ಕಾರ ರೂಪಿಸಿರುವ ಹೊಸ ಯೋಜನೆಗಳಾವುವು; ಈ ಹೊಸ ಯೋಜನೆಗಳಿಂದ ರೇಷ್ಮೆ ಬೆಳೆಗಾರರಿಗೆ ಆಗುವ ಅನುಕೂಲಗಳೇನು;

ಆ) ಬೆಳಗಾವಿ ಜಿಲ್ಲೆಯಲ್ಲಿ ರೇಷ್ಮೆ ವ್ಯವಸಾಯವನ್ನು ಅಭಿವೃದ್ಧಿಪಡಿಸಲು ರೇಷ್ಮೆ ರೈತರಿಗೆ ಯಾವ ಯಾವ ಕಾರ್ಯಕ್ರಮಗಳನ್ನು ಅನಿಷ್ಠಾನ ಗೊಳಿಸಲಾಗಿದೆ; ಎಷ್ಟು ಜನ ಫಲಾನುಭವಿ ರೈತರಿಗೆ ಯೋಜನೆಯ ಸೌಲಭ್ಯವನ್ನು ಒದಗಿಸಲಾಗಿದೆ (ಸಂಪೂರ್ಣ ಮಾಹಿತಿ ನೀಡುವುದು)

ಇ) ಬೆಳಗಾವಿ ಜಿಲ್ಲೆ ರಾಯಭಾಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರೈತರು ಬೆಳೆದ ರೇಷ್ಮೆ ಬೆಲೆಯನ್ನು ಮಾರಾಟ ಮಾಡಲು ದೂರದ ರಾಮನಗರಕ್ಕೆ ಹೋಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ತಾಲ್ಲೂಕು ರೇಷ್ಮೆ ಕೇಂದ್ರವನ್ನು ಉನ್ನತೀಕರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) 2013–14 ಹಾಗೂ 2014–15 ನೇ ಸಾಲಿನಲ್ಲಿ ಇಲಾಖೆಯಿಂದ ರೂಪಿಸಿರುವ ಹೊಸ ಯೋಜನೆಗಳು ಕೆಳಕಂಡಂತಿವೆ:

2013–14

1. ರೇಷ್ಮೆ ಗೂಡಿನ ಮಾರುಕಟ್ಟೆಗಳ ಆಧುನೀಕರಣ
2. ರೇಷ್ಮೆ ಗ್ರೇನೇಜುಗಳಲ್ಲಿ ಶೈತ್ಯಾಗಾರರಗಳನ್ನು ಸ್ಥಾಪಿಸುವುದು.

3. ರೇಷ್ಮೆ ಬಿತ್ತನೆ ಗೂಡುಗಳಿಗೆ ಪ್ರತಿ ಕೆ.ಜಿ.ಗೆ ₹ 20/– ರಂತೆ ಪ್ರೋತ್ಸಾಹಧನ ಪಾವತಿ.

4. ರೇಷ್ಮೆ ರೀಲರುಗಳ ಸಹಕಾರ ಸಂಘಗಳಿಗೆ ಕಚ್ಚಾ ರೇಷ್ಮೆ ಮೇಲೆ ಒತ್ತೆ ಸಾಲವನ್ನು ನೀಡಲು ಅನುದಾನ.

5. ರೇಷ್ಮೆ ಬಿಚ್ಚಾಣಿಕೆದಾರರು ಕೇಂದ್ರ ರೇಷ್ಮೆ ಮಂಡಳಿಯಿಂದ ಪಡೆದ ಸಾಲ ಮನ್ನಾ.

6. ಉತ್ತಮ ದರ್ಜೆ ಬೈವೋಲ್ಟೈನ್ ಕಚ್ಚಾ ರೇಷ್ಮೆಯನ್ನು ಉತ್ಪಾದಿಸಲು ಸ್ವಯಂ ಚಾಲಿತ ರೀಲಿಂಗ್ ಘಟಕ ಸ್ಥಾಪನೆಗೆ ಸಹಾಯಧನ.

7. ಭೂರಹಿತರಾಗಿದ್ದು ಹಿಪ್ಪನೇರಳೆ ಸೊಪ್ಪನ್ನು ಬೇರೆಯವರಿಂದ ಕೊಂಡು ಹುಳು ಸಾಕಾಣಿಕೆಯಲ್ಲಿ ತೊಡಗಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ರೈತರಿಗೆ ₹ 10,000/–ಗಳ ಮೌಲ್ಯದ ಉಪಕರಣಗಳ ಖರೀದಿಗೆ ಶೇ.50ರ ಸಹಾಯಧನ ಮತ್ತು ಕಡಿಮೆ ವೆಚ್ಚದ ಹುಳು ಸಾಕಾಣಿಕೆ ಶೆಡ್‌ಗಳನ್ನು ನಿರ್ಮಿಸಲು ಗರಿಷ್ಟ ₹10000/–ಗಳ ಸಹಾಯಧನ ಒದಗಿಸಲು ಉದ್ದೇಶಿಸಿದೆ.

8. ಮೈಸೂರು ಜಿಲ್ಲೆಯ ಕರ್ನಾಟಕ ರೇಷ್ಮೆ ಕೈಗಾರಿಕೆ ನಿಗಮದ (ಕೆ.ಎಸ್.ಐ.ಸಿ) ಹಳೆಯ ಘಟಕಗಳನ್ನು ಆಧುನೀಕರಣಗೊಳಿಸಲು ₹5.00 ಕೋಟಿಗಳನ್ನು ಒದಗಿಸಲಾಗಿದೆ.

2014–15

1. ಉತ್ಪಾದಕತೆ ಮತ್ತು ಉತ್ಪಾದನೆ ಆಧರಿಸಿ ನೀಡಲಾಗುತ್ತಿದ್ದ ಪ್ರತ್ಸಾಹಧನವನ್ನು ಪ್ರತಿ ಕೆ.ಜಿ. ಮಿಶ್ರತಳಿಗೆ ₹ 10/– ಹಾಗೂ ದ್ವಿತಳಿ ಸಂಕರಣ ಗೂಡಿಗೆ ₹ 40/–ನ್ನು ಕ್ರಮವಾಗಿ ₹ 30/– ಹಾಗೂ ₹50/–ಕ್ಕೆ ಹೆಚ್ಚಿಸಲಾಗಿದೆ.

2. ರೇಷ್ಮೆ ಉತ್ಪಾದಕತೆ ಮತ್ತು ಉತ್ಪಾದನೆ ಹೆಚ್ಚಿಸಲು ಸ್ಥಳೀಯ ಸರ್ಕಾರೇತರ ಮತ್ತು ಉದ್ಯಮಶೀಲರನ್ನು ತೊಡಗಿಸಿಕೊಂಡು 10 ಗ್ರಾಹಕರ ಸೇವಾ ಕೇಂದ್ರಗಳನ್ನು ಆಯೋಜಿಸಲು ಉದ್ದೇಶಿಸಿದೆ. ಪ್ರತಿ ಗ್ರಾಹಕರ ಸೇವಾ ಕೇಂದ್ರಕ್ಕೆ ಪರಿಕರಗಳನ್ನು ಶೇ.90ರ ಸಹಾಯಧನದಲ್ಲಿ ಒದಗಿಸಲು ಉದ್ದೇಶಿಸಿದೆ. ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ₹ 100.00 ಲಕ್ಷಗಳ ಅನುದಾನವನ್ನು ಒದಗಿಸಿಕೊಳ್ಳಲಾಗಿದೆ.

3. ಪ್ರಸ್ತುತ ರೇಷ್ಮೆ ಗೂಡು ಮಾರುಕಟ್ಟೆಯಲ್ಲಿ ಬಹಿರಂಗ ಹರಾಜು ವ್ಯವಸ್ಥೆಯಿದೆ. ಮಾರಾಟ ವ್ಯವಸ್ಥೆಯಲ್ಲಿ ಪಾರದರ್ಶಕವಾದ ಇ-ಟೆಂಡರ್ ಹರಾಜು ಪದ್ಧತಿಯನ್ನು ಜಾರಿಗೆ ತರಲು ಕಾರ್ಯಕ್ರಮ ರೂಪಿಸಿದೆ. ಪ್ರಾಯೋಗಿಕವಾಗಿ 5 ಗೂಡು ಮಾರುಕಟ್ಟೆಗಳಲ್ಲಿ ಇ-ಟೆಂಡರ್ ಹರಾಜು ಪದ್ಧತಿಯನ್ನು ಪೈಲೈಟ್ ಆಧಾರದ ಮೇಲೆ ಅಳವಡಿಸಲು ಯೋಜಿಸಲಾಗಿದೆ.

ಈ ಎಲ್ಲ ಹೊಸ ಯೋಜನೆಗಳಿಂದ ರೇಷ್ಮೆ ಬೆಳೆಗಾರರು ಉತ್ತಮ ಗುಣಮಟ್ಟದ ಗೂಡು ಉತ್ಪಾದಿಸಲು ಹಾಗೂ ರೇಷ್ಮೆ ಗೂಡಿಗೆ ಉತ್ತಮ ಮಾರುಕಟ್ಟೆ ಸೌಲಭ್ಯ ಒದಗಿಸಲು ಸಹಕಾರಿಯಾಗಿ ರೇಷ್ಮೆ ಅಭಿವೃದ್ಧಿಗೆ ಉತ್ತೇಜನಸಿಗುತ್ತದೆ.

ಆ) ಬೆಳಗಾವಿ ಜಿಲ್ಲೆಯಲ್ಲಿ ರೇಷ್ಮೆ ವ್ಯವಸಾಯವನ್ನು ಅಭಿವೃದ್ಧಿಪಡಿಸಲು ಅನುಷ್ಠಾನಗೊಲಿಸಿರುವ ಕಾರ್ಯಕ್ರಮಗಳು ಹಗೂ ಸೌಲಭ್ಯ ಪಡೆದ ಫಲಾನುಭವಿ ರೈತರ ಸಂಖ್ಯೆಯ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಇ) ಹೌದು, ಸರ್ಕಾರದ ಗಮನಕ್ಕೆ ಬಂದಿದೆ.

ಈ) ರೀಲಿಂಗ್ ಘಟಕಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದೆ. ಇದರಿಂದ ಮಾರುಕಟ್ಟೆ ವ್ಯವಸ್ಥೆ ಅಭಿವೃದ್ಧಿ ಹೊಂದುತ್ತವೆ.

ಪ್ರಶ್ನೆ ಸಂಖ್ಯೆ 128ಕ್ಕೆ ಅನುಬಂಧ

ಬೆಳಗಾವಿ ಜಿಲ್ಲೆಯ ರೇಷ್ಮೆ ಕೃಷಿ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳು ಹಾಗೂ ಫಲಾನುಭವಿಗಳ ವಿವರ

ಕ್ರ. ಸಂ	ಯೋಜನೆ / ಕಾರ್ಯಕ್ರಮ	ಫಲಾನುಭವಿಗಳ ಸಂಖ್ಯೆ
1	ಕೆಟಲಿಟಿಕ್ ಅಭಿವೃದ್ಧಿ ಯೋಜನೆ – ಸಾಮಾನ್ಯ	131
2	ಕೆಟಲಿಟಿಕ್ ಅಭಿವೃದ್ಧಿ ಯೋಜನೆ – ವಿಶೇಷ ಅಭಿವೃದ್ಧಿ ಯೋಜನೆ	181
3	ಕೆಟಲಿಟಿಕ್ ಅಭಿವೃದ್ಧಿ ಯೋಜನೆ – ವಿಶೇಷ ಘಟಕ ಯೋಜನೆ	28
4	ಕೆಟಲಿಟಿಕ್ ಅಭಿವೃದ್ಧಿ ಯೋಜನೆ – ಗಿರಿಜನ ಉಪ ಯೋಜನೆ	35
5	ನೂತನ ಕರ್ತೃತ್ವ ಶಕ್ತಿ – ವಿಶೇಷ ಘಟಕ ಯೋಜನೆ	30
6	ನೂತನ ಕರ್ತೃತ್ವ ಶಕ್ತಿ –ಗಿರಿಜನ ಉಪ ಯೋಜನೆ	30
7	ದ್ವಿತಳಿ ಚಾಕಿ ವೆಚ್ಚ	31
8	ರೇಷ್ಮೆ ವ್ಯವಸಾಯ ಅಭಿವೃದ್ಧಿ ಕ್ಲಸ್ಟರ್	158
9	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ	25
10	ರೇಷ್ಮೆ ಗೂಡು ಸಾಗಾಣಿಕೆ ವೆಚ್ಚ	76

ಅಗ್ನಿ ಶಾಮಕ ಕಟ್ಟಡ

3(130); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ಬೆಳಗಾವಿ ಜಿಲ್ಲೆ, ರಾಯಭಾಗ ತಾಲ್ಲೂಕಿನಲ್ಲಿರುವ ಅಗ್ನಿಶಾಮಕ ಕಟ್ಟಡವು ತಾತ್ಕಾಲಿಕ ಶೆಡ್ಡಿನಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?